ಕನ್ನಡಪ್ರಭ

# ಪ್ರವಾಸಪ್ರಭ

ಶನಿವಾರ 30.6.2012 www.kannadaprabha.com e-mail: kannadaprabha@gmail.com

ಪ್ರಕೃತಿಮಡಿಲ ರೆಸಾರ್ಟ್‌ನಲ್ಲಿ ಸ್ವರ್ಗ ಸುಖ



ಲೋಕವನ್ನೇ ಮರೆಸುವ ಪ್ರವಾಸಿ ತಾಣ

## ಕುರುಂಬಾ...!

ಚಿತ್ರ-ಲೇಖನ: ಜಿ.ವಿ. ಯತಿರಾಜು







ಅಲ್ಲಿ ಸ್ವರ್ಗವೇ ಧರೆಗಿಳಿದು ಬಂದಂತಿದೆ. ಕಣ್ಣು ಹಾಯಿಸಿದೆಲ್ಲೆಡೆ ವನಸಿರಿಯ ಸೊಬಗು. ಗುಡ್ಡ-ಬೆಟ್ಟಗಳಿಗೆ ಅಚ್ಚಹಸುರಿನ ಹಂದರವನ್ನೇ ಹಾಸಿದಂತಿದೆ. ಬಾನಾಡಿಗಳ ಕಲರವ, ಹರಿಯುತ್ತಿರುವ ನೀರಿನ ನಿನಾದವನ್ನೊಳಗೊಂಡ ಪ್ರಶಾಂತತೆಯ ತಾಣವದು. ಚುಮುಚುಮು ಚಳಿಯ ಸುಂದರ ವಾತಾವರಣದಲ್ಲಿ ಬೆಜ್ಜಗೆ ಕುಳಿತರೆ ಲೋಕವನ್ನೇ ಮರೆತು ಬಿಡುತ್ತೇವೆ.

ಇಂತಹ ಆಹ್ಲಾದಕರ ಅನುಭವ ನೀಡುವ ತಾಣ ಮತ್ತ್ಯಾವುದಲ್ಲ ಅದುವೇ 'ಕುರುಂಬಾ ವಿಲೇಜ್ ರೆಸಾರ್ಟ್'. ಇಲ್ಲಿನ ನಿಸರ್ಗ ಸೌಂದರ್ಯ ಸಂಪತ್ತು ಬಣ್ಣಿಸಲಸದಳ. ಗುಡ್ಡ-ಬೆಟ್ಟಗಳು ಒಂದಕ್ಕೊಂದು ಕೈಹಿಡಿದು ಏಕತೆಯ ಸಂದೇಶ ಸಾರುತ್ತಾ ನಿಂತಿರುವಂತಿದೆ. ಅವುಗಳನ್ನು ನೋಡುತ್ತಾ ಕುಳಿತರೇ ಅದರಲ್ಲೇ ಕಳೆದು ಹೋದ ಭಾವ.

ಕೆಲಸದ ಒತ್ತಡ, ಧಾವಂತ ಬದುಕು, ನೋವು, ಕಷ್ಟವನ್ನು ಅರೆಗಳಿಗೆಯಲ್ಲಿ ಮಾಯ ಮಾಡುವ ಮದ್ದು ಪ್ರಕೃತಿ ಮಾತೆಯ ಈ ಮಡಿಲಲ್ಲಿ ಇದೆ. ಸ್ವಚ್ಛ ಸುಂದರ ತಂಪಾದ ಹವೆಯನ್ನು ಆಸ್ವಾದಿಸುತ್ತಾ ಕುಳಿತು ಬಿಟ್ಟರೆ ಸಮಯ ಉರುಳಿದ್ದೇ ಗೊತ್ತಾಗುವುದಿಲ್ಲ. ಇದ್ದಷ್ಟು ಹೊತ್ತು ಖುಷಿ, ಮತ್ತಷ್ಟು ಹೊತ್ತು ಇರಬೇಕೆಂಬ ಆಸೆ ಹುಟ್ಟಿಸುವಂತಿರುವ 'ಕುರುಂಬಾ ವಿಲೇಜ್ ರೆಸಾರ್ಟ್' ಪರಿಸರ ಪ್ರಕೃತಿ ಮಾತೆಯ ಸೃಷ್ಟಿಸಿರುವ ವಿಸ್ಮಯವೇ ಸರಿ.







ಕುರುಂಬಾ ವಿಲೇಜ್ ರೆಸಾರ್ಟ್‌ಗೆ ಸರಿಸಾಟಿ ಇನ್ನಾವುದೇ ಇಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ. ಈ ಪ್ರಶಸ್ತ ತಾಣಕ್ಕೆ ತಲುಪುವುದೇ ಪ್ರವಾಸಿಗರ ಪಾಲಿಗೆ ಒಂದು ಹಬ್ಬ. ನೀಲಗಿರಿ ತಪ್ಪಲಿನಲ್ಲಿರುವ ರಸ್ತೆಯನ್ನು ಸೀಳಿಕೊಂಡು ಸಾಗುವುದೇ ವಿಶಿಷ್ಟ ಅನುಭವ. ಕೊಯಮತ್ತೂರಿನಿಂದ ಕೇವಲ 1 ಗಂಟೆಯಲ್ಲಿ ಕುರುಂಬಾಕ್ಕೆ ಪ್ರಯಾಣ. ಹೀಗೆ ಒಂದು ಗಂಟೆ ಪ್ರಯಾಣ ಬೆಳೆಸಿದ ಕೂಡಲೇ ಕಡಿದಾಗ ತಿರುವಿನಲ್ಲಿ ಕುರುಂಬಾಕ್ಕೆ ಹೋಗುವ ದಾರಿಯ ಕುರಿತಾದ ಮಾಹಿತಿ ಫಲಕವೊಂದು ಕಾಣಸಿಗುತ್ತದೆ. ಎಡಕ್ಕೆ ತಿರುಗಿ ಕಣಿವೆಗೆ ಇಳಿಮುಖವಾಗಿರುವ ಹಾದಿಯಲ್ಲಿ ತಳುಕುತ್ತಾ ಬಳಕುತ್ತಾ ಸಾಗುವುದೇ ಮೋಜು. ಸ್ವಲ್ಪವೇ ದೂರ ಸಾಗಿದ ಕೂಡಲೇ ಸ್ವರ್ಗಕ್ಕೆ ಬಂದೆವೋ ಎನ್ನುವಂತೆ ಭಾಸವಾಗುತ್ತದೆ. ಅಂಥ ಅಂದ 'ಕುರುಂಬಾ ವಿಲೇಜ್ ರೆಸಾರ್ಟ್'.

ಇಂತಹ ಸುಂದರ ತಾಣ ನೋಡಿದ ಕೂಡಲೇ 'ಬದುಕಿದ್ದಕ್ಕೂ ಸಾರ್ಥಕವಾಯಿತು, ಇಂಥದೊಂದು ಸ್ಥಳ ನೋಡುವ ಅವಕಾಶ ಸಿಕ್ಕಿತಲ್ಲ' ಎಂಬ ಸಾರ್ಥಕತೆಯ ಮಾತು ಬಾಯಿಂದ ಬಂದೇ ಬಿಡುತ್ತದೆ. ಈ ರೆಸಾರ್ಟ್‌ನ ಒಳಹೋದಂತೆಲ್ಲ ಸ್ವರ್ಗ ಸುಖದ ಅನುಭವ, ಏಕಾಂತತೆ ಸುಖಾನುಭವ. ನಿಸರ್ಗ ಮತ್ತು ಮಾನವ ನಡುವಿನ ಸಂಬಂಧ ಗಾಢವಾದದ್ದು ಎಂಬ ನಿಜ ಪಾಠವನ್ನು ಇಲ್ಲಿ ಅರಿಯಬಹುದು.

ಈ ಸ್ವಚ್ಛಂದ ಪರಿಸರದಲ್ಲಿ ಮಾನವ ನಿರ್ಮಿತ ಕಾಟೇಜ್‌ಗಳು ನಿಸರ್ಗದತ್ತವೇ ಎನ್ನುವಷ್ಟರ ಮಟ್ಟಿಗೆ ನೈಸರ್ಗಿಕ ಸೌಂದರ್ಯಕ್ಕನುಗುಣವಾಗಿ ನಿರ್ಮಿಸಲಾಗಿದೆ. ಸುಮಾರು 11 ಎಕರೆ ಪ್ರದೇಶದಲ್ಲಿ 17 ಕಾಟೇಜ್‌ಗಳನ್ನು ಪ್ರವಾಸಿಗರ ಅಭಿರುಚಿಗೆ ಅನುಗುಣವಾಗಿ ನಿರ್ಮಿಸಲಾಗಿದೆ. ಕಾಟೇಜ್ ಒಳಗಿನ ಸೌಂದರ್ಯಕ್ಕೂ ಒತ್ತು ನೀಡಲಾಗಿದೆ. ಕಟ್ಟಿಗೆಯ ಆಸನಗಳು, ಬಿದಿರಿನ ಕಲಾಕೃತಿಗಳು ಸೌಂದರ್ಯ ಇಮ್ಮಡಿಗೊಳಿಸಿವೆ. ಗೋಡೆಗಳಿಗೆ ಲೇಪನ ಮಾಡಿರುವ ಕಡು ಹಳದಿ ಹಾಗೂ ಕೇಸರಿ ಬಣ್ಣ ಶೋಭೆ ಹೆಚ್ಚಿಸಿದೆ.

ಈಜುಕೊಳ, ನಿಸರ್ಗವನ್ನು ಆಸ್ವಾದಿಸಲು ನಿರ್ಮಿಸಲಾಗಿರುವ ವ್ಯೂ ಪಾಯಿಂಟ್, ಹರಟೆ ಹೊಡೆಯ ಬಯಸುವವರಿಗೆ ಪರಗೋಲ, ಆಟ ಆಡ ಬಯಸುವವರಿಗೆ (ಟೇಬಲ್ ಟೆನಿಸ್, ಕೇರಂ, ಚೆಸ್) ಆಟದ ಕೋಣೆ, ವಾಕಿಂಗ್ ಪಾತ್, ಓದು ಪ್ರಿಯರಿಗಾಗಿ ಗ್ರಂಥಾಲಯ, ಈಜಿನ ಮೋಜು ಅನುಭವಿಸುವವರಿಗಾಗಿ ದೊಡ್ಡವರಿಗೆ ಮತ್ತು ಮಕ್ಕಳಿಗಾಗಿಯೇ ವಿಶೇಷವಾಗಿ ನಿರ್ಮಿಸಿರುವ ಈಜುಗೊಳ, ಮರದ ನೆರಳಿನಲ್ಲಿ ಸುಖನಿದ್ರೆಗೆ ಜಾರ ಬಯಸಬೇಕೆಂದರೆ ತೂಗು ಜೋಕಾಲಿಗಳು, ಹಸಿದು ಹೊಟ್ಟೆ ತುಂಬಿಸಿಕೊಳ್ಳಲು ಹೋದರೆ ವಿಶಾಲವಾಗಿರುವ ಸುಸಜ್ಜಿತ ಊಟದ ಕೋಣೆ ಹೀಗೆ ಇಲ್ಲಿ ಎಲ್ಲ ವಿಷಯದಲ್ಲಿ ಸುಂದರ, ಶಿಸ್ತಿಗೆ ಒತ್ತು ನೀಡಲಾಗಿದೆ. ನಿಸರ್ಗ ಸ್ನೇಹಿಯಾಗಿರುವ ಈ ರೆಸಾರ್ಟ್ ರಜಾ ದಿನಗಳನ್ನು ಕಳೆಯಲು ಹೇಳಿ ಮಾಡಿಸಿದ ಜಾಗ.

ಅಂದ ಹಾಗೆ, ಈ ರೆಸಾರ್ಟ್‌ಗಳ ಸುತ್ತಮುತ್ತಲಿನಲ್ಲಿ ಐದು ಪ್ರತ್ಯೇಕ ಸಮುದಾಯಕ್ಕೆ ಸೇರಿದ ಬುಡಕಟ್ಟು ಜನರು ವಾಸವಾಗಿದ್ದಾರೆ. ಇವರ ಪೈಕಿ 'ಕುರುಂಬಾ' ಎನ್ನುವ ಬುಡಕಟ್ಟು ಸಮುದಾಯವಿದೆ. ಇದೇ ಸಮುದಾಯದ ಹೆಸರನ್ನು ರೆಸಾರ್ಟ್‌ಗೆ ಇಟ್ಟಿರುವುದು ವಿಶೇಷ. ಈ ಕುರುಂಬಾಗಳು ನಿಸರ್ಗ ಪ್ರಿಯರು. ಎಷ್ಟೋ ವರ್ಷಗಳಿಂದ ಕಾಡಿನ ಮಧ್ಯದಲ್ಲಿದ್ದು ಕಾಡನ್ನು ಉಳಿಸಿ ಬೆಳೆಸುತ್ತಾ ಬದುಕು ಸಾಗಿಸುತ್ತಿದ್ದಾರೆ.

ರೆಸಾರ್ಟ್ ಮಾಲಿಕ ಕೂಡ ಪರಿಸರ ಪ್ರೇಮಿ. ಇವರ ಸುತ್ತಮುತ್ತಲಿನ ಪ್ರದೇಶದಲ್ಲಿ ಸುಮಾರು 2 ಸಾವಿರಕ್ಕೂ ಹೆಚ್ಚು ಗಿಡ-ಮರಗಳನ್ನು ನೆಟ್ಟು ಬೆಳೆಸಿದ್ದಾರೆ. ಅವರ ಈ ಪರಿಸರ ಪ್ರೇಮದಿಂದಾಗಿಯೇ ರೆಸಾರ್ಟ್‌ನ ಸುತ್ತು ಸುಂದರ ಸಸ್ಯ ಸಂಪತ್ತು ಜೀವಂತವಾಗಿದ್ದು ಕಂಗೊಳಿಸುತ್ತಿದೆ. ಇಲ್ಲಿದ್ದರೆ ಮನೆಗೆ ಮರಳಬೇಕು ಎಂದೆನಿಸುವುದೇ ಇಲ್ಲ. ಇನ್ನಷ್ಟು ಕಾಲ ಇರಬೇಕಿತ್ತು ಎಂದು ಭಾರವಾದ ಮನಸ್ಸು ಹೊತ್ತು ಅನಿವಾರ್ಯವಾಗಿ ತಮ್ಮೂರಿನತ್ತ ಹೆಜ್ಜೆ ಹಾಕುವವರೇ ಹೆಚ್ಚು. ಒಂದೊಮ್ಮೆ ಈ ತಾಣಕ್ಕೆ ಭೇಟಿಕೊಟ್ಟರೆ ಮನ ತಣಿಯುವುದಂತೂ ನಿಜ. 'ಕುರುಂಬಾ ವಿಲೇಜ್ ರೆಸಾರ್ಟ್'ಗೆ ಲಾಗಿನ್ ಮಾಡಿದರೆ ಸಂಪೂರ್ಣ ಮಾಹಿತಿ ನಿಮ್ಮ ಅಂಗೈಯಲ್ಲಿ. ಹಾಗಿದ್ದರೆ ತಡವೇಕೆ ? ಕುರುಂಬಾಕ್ಕೆ ಹೊರಟುಬಿಡಿ. ■



## ಲಗೇಜ್‌ಗೆ ನೀವೇ ಜವಾಬ್ದಾರರು...

ಪಯಣ

ಅಮಿತಾನಂದದ ಕಡೆಗೆ...

● ಗಿರಿಧರ್ ಗಾಡಿಕೊಪ್ಪ



ಪ್ರವಾಸದ ವೇಳೆ ಸಿದ್ಧತೆಗಳು ಒಂದಲ್ಲಾ ಎರಡಲ್ಲ. ಸುಖಕರ ಯಾನಕ್ಕೆ ಅನುಸರಿಸುವ ಹಲವಾರು ತಯಾರಿಗಳಲ್ಲಿ ಒಂದಾದರೂ ಏರುಪೇರಾದರೆ ಇಡೀ ಯಾನ ನೀರಲ್ಲಿ ಹೋಮ ಮಾಡಿದಂತೆಯೇ. ಯಾನ ಶುರುವಾದ ಮೇಲೆ ಮತ್ತದೇ ಮರೆತ ಇಲ್ಲವೇ ಕಳೆದು ಹೋದ ವಸ್ತುಗಳ ಬಗ್ಗೆಯೇ ಚಿಂತನೆ ಶುರುವಾಗುತ್ತದೆ. ಅದರಲ್ಲೂ ಅತಿಯಾದ ನಿರೀಕ್ಷೆಯಿಟ್ಟ ವಸ್ತುಗಳು ಕಳೆದರಂತೂ ಚಿಂತೆಯ ಚಿತೆಯಲ್ಲೇ ಬೆಂದುಹೋದವರಂತೆಯೂ ಆಗಿಬಿಡುತ್ತಾರೆ. ಅಷ್ಟೆಲ್ಲಾ ಅಟ್ಯಾಚ್‌ಮೆಂಟ್ ಹೊಂದಿರುವಂತಹ ವಸ್ತುಗಳ ಕಾಳಜಿ ಮಾತ್ರ ಪ್ರವಾಸ ಸಂದರ್ಭ ಮರೆಯದಿರಲು ಏನೆಲ್ಲಾ ಕಸರತ್ತು ಮಾಡಿರುತ್ತೇವೆ, ಆದರೂ ಮುಗ್ಗರಿಸುತ್ತೇವೆ. ಅಲ್ಲವೆ?

ಯಾವುದೇ ಘಳಿಗೆಯಲ್ಲಿ ಪ್ರವಾಸ ಕೈಗೊಂಡಾಗಲೂ ಸಮಯದ ಅರಿವು ಅಗತ್ಯ. ಅದರಲ್ಲೂ ಹೆಣ್ಣು ಮಕ್ಕಳಿಗಂತೂ ಯಾನದ ಬಗ್ಗೆ ಸ್ಪಷ್ಟ ಚಿತ್ರಣ, ತಮ್ಮೊಂದಿಗೆ ತರಬೇಕಾದ ಲಗೇಜ್‌ಗಳತ್ತಲೂ ಗಮನ ಅತ್ಯಗತ್ಯ. ಅಂಗಡಿಗಳೆಲ್ಲ ಸುತ್ತಾಡಿ ತಂಡ ಅಧಿಕ ಬೆಲೆಯ ವಸ್ತ್ರಗಳು, ಆರೋಗ್ಯಕ್ಕೆ ಸಂಬಂಧಿಸಿದ ಪದಾರ್ಥಗಳು, ಕಾಗದ-ಪತ್ರಗಳ ದಾಖಲೆಗಳು, ಆತ್ಮೀಯರು ನೀಡಿದ ಕೊಡುಗೆಗಳನ್ನು ಕಾಳಜಿಯಿಂದ ಮನೆಗೆ ತೆಗೆದುಕೊಂಡು ಹೋಗುವ, ಇಲ್ಲವೇ ಮನೆಯವರಿಗೆ ನೀಡಲೆಂದೇ ಕೊಂಡು ತಂದ ಥರಾವರಿ ವಸ್ತುಗಳು ಕೈತಪ್ಪದಂತೆ ಎಚ್ಚರಿಕೆ ವಹಿಸುವಲ್ಲಿ ಹೆಚ್ಚಿನ ನಿಗಾ ಬೇಕೇ ಬೇಕು. ಜನನಿಬಿಡ ಸ್ಥಳಗಳಲ್ಲಿ ಸಾಗುವಾಗ ಲಗೇಜ್ ಬ್ಯಾಗ್ ಕೈಯಲ್ಲೇ ಇದ್ದರೂ, ನಾಜೂಕಾಗಿ ಜಿಪ್ ಬಿಚ್ಚಿ ಬ್ಯಾಗಲ್ಲಿನ ವಸ್ತುಗಳನ್ನು ಎಗರಿಸುವ ಚಾಲಾಕಿಗಳಿಗೇನೂ ಕಡಿಮೆ ಇಲ್ಲ. ವ್ಯಾನಿಟಿ ಬ್ಯಾಗ್, ಜೇಬಲ್ಲಿನ ಪರ್ಸ್‌ಗಳನ್ನೂ ಲಗೇಜ್‌ಗೆ ಹೋಲಿಸಿಕೊಳ್ಳಲೇಬೇಕು. ಏಕೆಂದರೆ, ಆರ್ಥಿಕ ವ್ಯವಹಾರದ ಎಲ್ಲ ರೀತಿಯ ಕಾರ್ಡ್‌ಗಳು, ಡಿಎಲ್, ಕಂಪನಿಗೆ ಸಂಬಂಧಿಸಿದ ಕೆಲ ರೀತಿಯ ಕಾರ್ಡ್‌ಗಳಿಗೂ ವ್ಯಾನಿಟಿ ಬ್ಯಾಗ್ ಹಾಗೂ ಪರ್ಸ್‌ಗಳಲ್ಲಿ ಸ್ಥಾನ ಮೀಸಲಿರುತ್ತದೆ. ಇಂಥ ಸಂದರ್ಭಗಳಲ್ಲಿ ಯಾವೊಂದು ಮಂಗಮಾಯವಾದರೂ ಯಾನ ಕೊಲ್ಯಾಪ್ಸ್. ಬೇಕಿದ್ರೆ, ಅನುಭವಿಸಿದವರನ್ನ ಕೇಳಿ ನೋಡಿ...

ಇದ್ದೂರಲ್ಲೇ ಇಂಥ ಘಟನೆಗಳಾದರೆ ಪರವಾಗಿಲ್ಲ. ಏಕೆಂದರೆ, ಕೆಲ ದಿನ ತಡವಾದರೂ ಪುನಃ ಪಡೆಯಬಹುದು. ಆದರೆ, ಬೇರೆ ಊರುಗಳಲ್ಲಿ ಇಂಥ ಸಮಸ್ಯೆಗಳಾದಲ್ಲಿ ಅಕ್ಷರಶಃ ಭಿಕ್ಷುಕರಂತಾಗುತ್ತೇವೆ. ಒಂಟಿ ಪಯಣ ಅಥವಾ ತಂಡದೊಂದಿಗೆ ಪಯಣಿಸುವಾಗಲೂ ಎಚ್ಚರ ವಹಿಸಲೇಬೇಕು. ಸಭೆ, ಸಮಾರಂಭಗಳಿಗೆ ತೆರಳುವಾಗ ಅಗತ್ಯವಾಗಿ ಬೇಕಾದ ವಸ್ತುಗಳೇ ಇಲ್ಲದಿರುವಾಗ ಆಗುವ ಮಾನಸಿಕ ಆಘಾತ ಅಷ್ಟಿಷ್ಟಲ್ಲ. ಕೆಲವೊಂದು ವಸ್ತುಗಳು, ಅವುಗಳಿಗಿಂತ ಎಷ್ಟೇ ಮಹತ್ವದ ವಸ್ತುಗಳು ದೊರಕಿದರೂ ಕಳೆದುಹೋದವುಗಳ ಸ್ಥಾನ ತುಂಬುವುದಿಲ್ಲ. ಅನಾಮಿಕರೊಂದಿಗೆ ಸಲುಗೆಯಿಂದಿದ್ದು ಲಗೇಜ್ ಕಳೆದುಕೊಂಡ ಸಾಕಷ್ಟು ಮಂದಿ ನಿತ್ಯ ಸುದ್ದಿಯಾಗುತ್ತಾರೆ. ಭಾರ ಹೊರುವ ಮೈಗಳ್ಳತನ ತಂದೊಡ್ಡುವ ಇಂಥ ಏರುಪೇರುಗಳಿಂದ ನಿಜಕ್ಕೂ ಆ ದಿನದ ಪ್ರವಾಸ ಮಾತ್ರ ಜೀವನದಲ್ಲಿ ಮರೆಯಲಾಗದಂಥ ಪಾಠ ಕಲಿಸುತ್ತದೆ. ಆದರೆ, ಅರಿತು ನಡೆಯುವವರು ಮಾತ್ರ ವಿರಳ.

ಇನ್ನು ವಾಹನಗಳಲ್ಲಿ ಚಲಿಸುವಾಗ ನಿರ್ಲಕ್ಷ್ಯದಿಂದ ಬಿದ್ದುಹೋದ ಲಗೇಜ್‌ಗಳು ಹುಡುಕುವುದೂ ಕಷ್ಟ. ಅಷ್ಟೇ ಅಲ್ಲ, ಲಗೇಜ್ ಸಿಕ್ಕವರು ಮಾನವೀಯತೆಯಿಂದ ಪುನಃ ಸಂಬಂಧಿಸಿದವರಿಗೆ ತಲುಪಿಸುವಲ್ಲಿಯೂ ಪರೋಕ್ಷವಾಗಿ ಶಿಕ್ಷೆಗೆ ಕಾರಣರಾಗುತ್ತದೆ ನಿರ್ಲಕ್ಷ್ಯ ಎಂಬುದು. ಲಗೇಜ್‌ಗಳಿಗೂ ಮಕ್ಕಳಂತೆಯೇ ಕಾಳಜಿ ವಹಿಸಬೇಕು ಎಂಬುದನ್ನು ಮಾತ್ರ ಮರೆಯಬಾರದು. ದಿನನಿತ್ಯ ಮನೆಯಿಂದ ಉದ್ಯೋಗ ನಿಮಿತ್ತ ಒಂದಿಲ್ಲೊಂದು ರೀತಿಯಲ್ಲಿ ಲಗೇಜ್‌ಗಳೊಂದಿಗೆ ಸಂಬಂಧ ಬೆಸೆದುಕೊಂಡಿರುವುದರಿಂದ ಮೈಯೆಲ್ಲಾ ಕಣ್ಣಾಗಿರಲೇಬೇಕು. ಏನಂತೀರಿ? ■

